# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ನಿವೃತ್ತಿ ವೇತನಕ್ಕೆ ಕರ್ನಾಟಕ ನಾಗರೀಕ ಸೇವಾ ನಿಯಮ 247–ಎ ರಲ್ಲಿನ ಸೌಲಭ್ಯ ವಿಸ್ತರಿಸಲು ಕೋರಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಿಸಿರುವ ಅರ್ಜಿ ಸಂಖ್ಯೆ: 351–390/2017 ರಲ್ಲಿ ಕು॥ ವಾಸಂತಿ ಬ ಶಹಾಪೂರಕರ, ನಿವೃತ್ತ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಧಾರವಾಡ ಜಿಲ್ಲೆ – ಆದೇಶ.

**ಓದಲಾಗಿದೆ:**

1) ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ: 8047–8062/2015 ರಲ್ಲಿ ನೀಡಿರುವ ಆದೇಶ ದಿನಾಂಕ: 12–02–2016.
2) ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನಿಂದನಾ ಅರ್ಜಿ ಸಂಖ್ಯೆ: 351–390/2017.
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಧಾರವಾಡ ಜಿಲ್ಲೆ. ಇವರ ಪತ್ರ ಸಂಖ್ಯೆ: ಧಾಜಿಪಂ/ಆಡಳಿತ/ಸಿ–7/ಸಿಆರ್/2017–18/738.
4) ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 4 ಎಸ್‌ಆರ್‌ಎ 2010, ದಿನಾಂಕ:15–02–2012.
5) ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 4 ಎಸ್‌ಆರ್‌ಎ 2016, ದಿನಾಂಕ:10–04–2017.

**ಪ್ರಸ್ತಾವನೆ:**

ನಿವೃತ್ತಿ ವೇತನಕ್ಕೆ ಕರ್ನಾಟಕ ನಾಗರೀಕ ಸೇವಾ ನಿಯಮ 247–ಎ ರಲ್ಲಿನ ಸೌಲಭ್ಯ ವಿಸ್ತರಿಸಲು ಕೋರಿ ಕು॥ ವಾಸಂತಿ ಬ ಶಹಾಪೂರಕರ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಧಾರವಾಡ ಜಿಲ್ಲೆ ಇವರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಿಸಿರುವ ಅರ್ಜಿ ಸಂಖ್ಯೆ: 8047–8062/2015 ರಲ್ಲಿ ನೀಡಿರುವ ಆದೇಶ ದಿನಾಂಕ: 12–02–2016 ರಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ಆದೇಶದಲ್ಲಿ ಅರ್ಜಿದಾರರು ಸಲ್ಲಿಸುವ ಮನವಿಯನ್ನು ನಿಯಾಮಾನುಸಾರ ಪರಿಗಣಿಸಿ ಅರ್ಜಿದಾರರ ಕೋರಿಕೆಯ ಬಗ್ಗೆ ಸೂಕ್ತ ಆದೇಶ ಹೊರಡಿಸುವಂತೆ ನಿರ್ದೇಶನ ನೀಡಿರುತ್ತದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಧಾರವಾಡ ಜಿಲ್ಲೆ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದ ಸಂಗಡ ಸಲ್ಲಿಸಿರುವ ಮಾಹಿತಿ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಸದರಿ ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು/ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ರವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ 247–ಎ ರಲ್ಲಿನ ಸೌಲಭ್ಯವನ್ನು ವಿಸ್ತರಿಸಲು ಸರ್ಕಾರವು ಪರಿಗಣಿಸಿದೆ.

ಆರ್ಥಿಕ ಇಲಾಖೆಯು ಮೇಲೆ ಓದಲಾದ ಕ್ರ.ಸಂ (3) ಮತ್ತು (4) ರಲ್ಲಿನ ಅನಧಿಕೃತ ಟಿಪ್ಪಣಿಯಲ್ಲಿ ಅರ್ಜಿದಾರರುಗಳಿಗೆ ನಿಯಮ 247–ಎ ರಡಿಯ ಸೌಲಭ್ಯವನ್ನು ನಿಯಮಾನುಸಾರ ಅನುಷ್ಠಾನಗೊಳಿಸಲು ಸೂಕ್ತ ಕಾರ್ಯಕಾರಿ ಆದೇಶ ಹೊರಡಿಸಲು ಸಹ್ಮತಿಯನ್ನು ನೀಡಿರುತ್ತದೆ. ಈ ಬಗ್ಗೆ ಪರಿಶೀಲಿಸಲಾಗಿದೆ. ಮೇಲೆ ಓದಲಾದ ಕ್ರ.ಸಂ (4) ರ ಅನಧಿಕೃತ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು ಪ್ರಸ್ತಾಪಿತ ನಿಯಮ 247–ಎ ರನ್ವಯ ಗರಿಷ್ಠ **ಎರಡು ವರ್ಷಗಳ** ಅಧಿಕ ಸೇವಾವಧಿಯನ್ನು ಸದರಿ ಅರ್ಜಿದಾರರುಗಳ ಸೇವೆಯ ನಿವೃತ್ತಿ ವೇತನ ಸೌಲಭ್ಯಗಳಿಗೆ ಮಾತ್ರ ಅರ್ಹತದಾಯಕ ಸೇವೆಯೆಂದು ಪರಿಗಣಿಸಲು ಆರ್ಥಿಕ ಇಲಾಖೆಯು ಸಹಮತಿಸಿರುತ್ತದೆ. ಆದುದರಿಂದ ಸದರಿಯವರುಗಳ ಸೇವಾ ವಿವರಗಳನ್ನು ಪರಿಶೀಲಿಸಿ, ಅವರುಗಳಿಗೆ ಲಭ್ಯವಾಗುವ ಸೇವಾ ಸೌಲಭ್ಯಗಳನ್ನು ನೀಡಲು ಸೂಕ್ತ ಪ್ರಸ್ತಾವನೆ ಮತ್ತು ಅರ್ಜಿದಾರರ ಸೇವಾ ಪುಸ್ತಕಗಳನ್ನು ಮಹಾಲೇಖಪಾಲರಿಗೆ ಕಳುಹಿಸಿಕೊಡುವಂತೆ ಸಕ್ಷಮ ಪ್ರಾಧಿಕಾರಿಗಳಿಗೆ ಆದೇಶ ಹೊರಡಿಸಲು ತಿಳಿಸಬಹುದಾಗಿದೆ.

ಅದರಂತೆ ಈ ಕೆಳಕಂಡಂತೆ ಆದೇಶ

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/111/ಗ್ರಾಪಂಸಿ/2017**

**ಬೆಂಗಳೂರು, ದಿನಾಂಕ: 12-07-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಅಧಿಕಾರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247-ಎ ರನ್ವಯ ಗರಿಷ್ಟ **ಎರಡು ವರ್ಷಗಳ** ಅಧಿಕ ಸೇವಾವಧಿಯನ್ನು ಶ್ರೀಯುತರಿಗೆ ಪ್ರಸ್ತುತ ಸೇವೆಯ ನಿವೃತ್ತ ವೇತನ ಸೌಲಭ್ಯಗಳಿಗೆ ಮಾತ್ರ ಅರ್ಹದಾಯಕ ಸೇವೆಯೆಂದು ಪರಿಗಣಿಸಲು ಆದೇಶಿಸಿದೆ.

| ಕ್ರಸಂ. | ಹೆಸರು | ಹುಟ್ಟಿದ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಸೇವೆಯಿಂದ ವಯೋ ನಿವೃತ್ತಿ ಹೊಂದಿದ ದಿನಾಂಕ |
|---|---|---|---|---|
| 1 | ಕು॥ ವಾಸಂತಿ ಬ ಶಹಾಪೂರಕರ | 05-05-1954 | 29-03-1994 | 31-05-2014 |

| ಕ್ರ ಸಂ. | ಅವಧಿ | ನಿಯಮ 247-ಎ ರನ್ವಯ ಹೆಚ್ಚುವರಿ ಅರ್ಹದಾಯಕ ಸೇವೆಯನ್ನು ಸೇರಿಸಲು ಅವಕಾಶವಿರುವ ಗರಿಷ್ಟ ಅವಧಿ |
|---|---|---|
| 1 | ದಿನಾಂಕ: 09-11-2004 ಕ್ಕಿಂತ ಪೂರ್ವದಲ್ಲಿನಿವೃತ್ತಿ ಹೊಂದಿರುವ ಪ್ರಕರಣಗಳಿಗೆ ದಿ: 01-01-1971 ರಿಂದ ದಿನಾಂಕ: 03-11-2004 ರವರೆಗೆ) | ಸದರಿ ನಿಯಮದ ಉಪ ನಿಯಮಗಳಿಗೆ ಷರತ್ತಿಗೆ ಒಳಪಟ್ಟು, ನೇಮಕಾತಿ ನಿಯಮಗಳಿಗೆ ಸುಸಂಗತವಾಗಿ ಅಥವಾ ಅವುಗಳಿಗನುಸಾರವಾಗಿ 30 ವರ್ಷ ದಾಟಿದ ತರುವಾಯ ನೇರ ನೇಮಕಾತಿಯಾಗುವ ವ್ಯಕ್ತಗಳ ಸಂದರ್ಭದಲ್ಲಿ, ಅವರ ಅರ್ಹತಾ ಸೇವೆಗೆ ಗರಿಷ್ಟ 8 ವರ್ಷಗಳಿಗೆ ಒಳಪಟ್ಟು ನೇರ ನೇಮಕಾತಿಯ ದಿನಾಂಕದ ನಿಕಟ ಪೂರ್ವದ ಅವರ ಜನ್ಮದಿನಾಂಕದಂದು ಆಗಿದ್ದ ವಯಸ್ಸು ಮತ್ತು 30 ವರ್ಷ-ಇವುಗಳ ನಡುವಿನ ವ್ಯತ್ಯಾಸಕ್ಕೆ ಸಮನಾದ ಅವಧಿಯನ್ನು ಗರಿಷ್ಟ 8 ವರ್ಷಗಳ ಹೆಚ್ಚುವರಿ ಅರ್ಹದಾಯಕ ಸೇವೆ. |
| 2 | ದಿ: 04-11-2004 ರಿಂದ ದಿ: 15-02-2012 ರವರೆಗಿನ ಅವಧಿಯಲ್ಲಿ ನಿವೃತ್ತಿ ಹೊಂದಿರುವ ಪ್ರಕರಣಗಳಿಗೆ | ಗರಿಷ್ಟ 4 ವರ್ಷಗಳ ಹೆಚ್ಚುವರಿ ಅರ್ಹದಾಯಕ ಸೇವೆ.<br>ದಿ: 14-02-2012 ರ ಪೂರ್ವದಲ್ಲಿ ನಿವೃತ್ತರಾದ ಸರ್ಕಾರಿ ನೌಕರರ ಪ್ರಕರಣಗಳಿಗೆ ಸಂಬಂಧಿಸಿದಂತೆ ಆ ಅವಧಿಯಲ್ಲಿ ಜಾರಿಯಲ್ಲಿದ್ದ 247-ಎ ರ ಉಪಬಂಧಗಳನ್ವಯ ಹೆಚ್ಚುವರಿ ಸೇವೆ ಸೇರ್ಪಡೆ ಕುರಿತ ಪ್ರಕರಣಗಳನ್ನು ಆಡಳಿತ ಇಲಾಖೆಯು ಸಂಬಂಧಪಟ್ಟ ಎಲ್ಲಾ ಅಗತ್ಯ ಮಾಹಿತಿ/ದಾಖಲೆಗಳೊಂದಿಗೆ ನಿಯಮಾನುಸಾರ ಪರಿಶೀಲಿಸಿ, ಇತ್ಯರ್ಥಪಡಿಸತಕ್ಕದ್ದು. |

| | | |
|---|---|---|
| 3 | ದಿ: 15-02-2012 ರ ನಂತರ ನಿವೃತ್ತಿ ಹೊಂದಿರುವ/ಹೊಂದುವ ಪ್ರಕಣಗಳಿಗೆ | ಗರಿಷ್ಟ 2 ವರ್ಷಗಳ ಹೆಚ್ಚುವರಿ ಅರ್ಹದಾಯಕ ಸೇವೆ.<br>ಕ.ನಾ.ಸೇ.ನಿಯಮಾವಳಿ ನಿಯಮ 247-ಎ ಕ್ಕೆ ದಿ: 15-02-2012 ರ ಎಫ್‌ಡಿ 4 ಎಸ್‌ಆರ್‌ಎ 2010 ರ ಅಧಿಸೂಚನೆಯಲ್ಲಿ ಸಮಗ್ರವಾಗಿ ತಿದ್ದುಪಡಿ ತರಲಾಗಿದೆ. ಸದರಿ ನಿಯಮದನ್ವಯ ಪಿಂಚಣಿ ಉದ್ದೇಶಕ್ಕಾಗಿ ಅರ್ಹದಾಯಕ ಸೇವೆಯ ಸೇರ್ಪಡೆ ಮಾಡುವ ಬಗ್ಗೆ ದಿ: 30-05-2012 ರ ಆಇ 257 ಸೇ-3/2012 ರ ಸುತ್ತೋಲೆಯಲ್ಲಿ ಮಾರ್ಗದರ್ಶನಗಳನ್ನು ನೀಡಿದೆ.<br>ದಿ:15-02-2012 ರ ನಂತರ ನಿವೃತ್ತಿ ಹೊಂದಿರುವ ಪ್ರಕರಣಗಳಲ್ಲಿ ಮಹಾಲೇಖಪಾಲರು ನಿಯಮಾನುಸಾರ 247 ಎ ರ ಸೌಲಭ್ಯವನ್ನು ಅರ್ಹವಿರುವ ಪ್ರಕರಣಗಳಲ್ಲಿ ಮಂಜೂರು ಮಾಡಿ, ನಿವೃತ್ತಿ ವೇತನವನ್ನು ನಿಗದಿಪಡಿಸುತ್ತಾರೆ.<br>ಈ ನಿಯಮದ ತಿದ್ದುಪಡಿ ಅನ್ವಯ ಈ ನಿಯಮದ ಅವಕಾಶಗಳು ನೇರನೇಮಕಾತಿ ಪ್ರಕರಣಗಳಿಗೆ ಮಾತ್ರ ಅನ್ವಯವಾಗುವುದಿಲ್ಲವೆಂಬ ನಿಬಂಧನೆಯಿದ್ದರೂ, ನ್ಯಾಯಾಲಯಗಳ ತೀರ್ಪಿಗಳ ಹಿನ್ನೆಲೆಯಲ್ಲಿ ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 6 ರ ಅವಕಾಶದಂತೆ ಈ ವರ್ಗದ ಸರ್ಕಾರಿ ನೌಕರರಿಗೂ ಸಹ ನೇರ ನೇಮಕಾತಿಯಿಂದ ನೇಮಕಗೊಂಡ ಇತರೆ ದಿನಗೂಲಿ/ಸ್ಟೈಪೆಂಡರಿ ಆಧಾರದ ಮೇಲೆ ಕಾರ್ಯನಿರ್ವಾಹಿಸಿದ್ದ, ಸರ್ಕಾರಿ ನೌಕರರಿಗೆ ಅನ್ವಯವಾಗುವಂತೆ ಗರಿಷ್ಠ ಎರಡು ವರ್ಷಗಳ ಅರ್ಹತಾದಾಯಕ ಸೇವೆಯನ್ನು ಪಿಂಚಣಿ ಉದ್ದೇಶಕ್ಕೆ ಅಧಿಕ ಅರ್ಹತಾದಾಯಕ ಸೇವೆಯಾಗಿ ಪರಿಗಣಿಸಲು ಸರ್ಕಾರದ ಆದೇಶ ಸಂಖ್ಯೆ: ಆಇ 4 ಎಸ್‌ಆರ್‌ಎ 2016, ದಿನಾಂಕ: 10-04-2017 ರಲ್ಲಿ ನಿಯಮ 247-ಎ ರ ಸೌಲಭ್ಯಕ್ಕೆ ಅನುಮತಿ ನೀಡಲಾಗಿರುತ್ತದೆ. |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಧಾರವಾಡ ಜಿಲ್ಲೆ ಇವರು ಸಂಬಂಧಪಟ್ಟ ನಿವೃತ್ತ ನೌಕರರುಗಳಿಗೆ ಈ ಆದೇಶದಂತೆ ನಿವೃತ್ತಿವೇತನ ನಿಗಧಿಪಡಿಸಲು ಮಹಾಲೇಖಪಾಲರಿಗೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಆದೇಶ ಪ್ರತಿ ಮತ್ತು ನೌಕರರ ಸೇವಾ ಪುಸ್ತಕದೊಂದಿಗೆ ಮಹಾಲೇಖಪಾಲರಿಗೆ ಪ್ರಸ್ತಾವನೆ ಸಲ್ಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆ ರವರ ಆದೇಶ ಸಂಖ್ಯೆ: ಆಇ 4 ಎಸ್‌ಆರ್‌ಎ 2016, ದಿನಾಂಕ: 10-04-2017 ರಲ್ಲಿ ನೀಡಿರುವ ಅಭಿಪ್ರಾಯದ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ:**

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಧಾರವಾಡ ಜಿಲ್ಲೆ.
3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಕುಂದಗೋಳ, ಧಾರವಾಡ ಜಿಲ್ಲೆ.

4) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸೇವೆಗಳು-1) ವಿಧಾನಸೌಧ, ಬೆಂಗಳೂರು.

5) ಸರ್ಕಾರಿ ವಕೀಲರು, ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕಂದಾಯ ಭವನ, ಬೆಂಗಳೂರು. (ಸದರಿ ಆದೇಶದ ಪ್ರತಿಯನ್ನು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ ಅವಗಾಹನೆಗೆ ತರಬೇಕೆಂದು ಕೋರಿದೆ)

6) ಕು॥ ವಾಸಂತಿ ಬ ಶಹಾಪೂರಕರ, ಎಸ್.ಎಮ್. ಬಂಡಿವಾಡ ಮನೆ ಸಂಖ್ಯೆ: 48 ಚಿದಂಬರ ನಗರ, 3ನೇ ಕ್ರಾಸ್ ಚಿದಂಬರ ದೇವಸ್ಥಾನ ಮಾರ್ಗ, ಬೆಳಗಾವಿ ಜಿಲ್ಲೆ.

7) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.